86/3


JSS Mahavidyapeetha, Mysore - 04

# JSS INSTITUTE OF EDUCATION

(Recognized by the NCTE and Affiliated to University of Mysore, Mysore)

Sakleshpur – 573 134, PB No 26, Hassan Dist.

Email: jssioebedskp@gmail.com website: https://jssioebedskp.org.in Phone No: 97405 91647


## ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯಡಿಯಲ್ಲಿ ಉಚಿತ ಆರೋಗ್ಯಕಾರ್ಡ ಸೃಜನೆ ಮತ್ತು ವಿತರಣಾ ಶಿಬಿರ

## (Free health card distribution under Ayushman Bharat Pradhan Mantri Janaragy Yojana scheme)






ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯಡಿಯಲ್ಲಿ ಉಚಿತ ಆರೋಗ್ಯಕಾರ್ಡ ಸೃಜನೆ ಮತ್ತು ವಿತರಣಾ ಶಿಬಿರದ ವೇದಿಕ ಕಾರ್ಯಕ್ರಮ.





ಸಕಲೇಶಪುರ ಪಟ್ಟಣದ ಶ್ರೀ ಸಾಯಿ ಸೈಬರ್ ಮಾಲಿಕರಾದ ಶ್ರೀ ಮಂಜುನಾಥ್ ಹಾಗೂ ಕುಮಾರಿ ಚೈತ್ರ ರವರು ನಮ್ಮ ಕಾಲೇಜಿನ ಪ್ರಶಿಕ್ಷಣಾರ್ಥಿಗಳಿಗೆ ಉಚಿತವಾಗಿ ಆಯುಷ್ಮಾನ್ ಭಾರತ ಹೆಲ್ತ್ ಕಾರ್ಡ್ ಸೃಜಿಸಿಕೊಡುತ್ತಿರುವುದು.

ದಿನಾಂಕ 03.03.2023 ರ ಶುಕ್ರವಾರ ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯಡಿಯಲ್ಲಿ ಉಚಿತ ಆರೋಗ್ಯಕಾರ್ಡ ಸೃಜನೆ ಮತ್ತು ವಿತರಣಾ ಶಿಬಿರವನ್ನು ನಡೆಸಲಾಯಿತು.

ಈ ಶಿಬಿರವನ್ನು ಆಯೋಜಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಐಕ್ಯೂಎಸಿ ಸಂಯೋಜಕರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ಎಂ.ಕೆ ರವರು ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡನ ಸದುಪಯೋಗದ ಬಗ್ಗೆ ವಿವರಿಸುತ್ತಾ ಬಿಪಿಎಲ್ ಪಡಿತರ ಕಾರ್ಡ ಹೊಂದಿರುವವರು ಮತ್ತು ರಾಷ್ಟ್ರೀಯ ಸ್ವಾಸ್ತ್ಯ

ಭೀಮಾ ಯೋಜನೆಯಲ್ಲಿ ನೊಂದಾಯಿತರಾಗಿರುವ ಫಲಾನುಭವಿಗಳು ವಾರ್ಷಿಕ ಕುಟುಂಬಕ್ಕೆ ತಲಾ 5 ಲಕ್ಷ ರೂಗಳವರೆಗೂ ನೊಂದಾಯಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯಬಹುದಾಗಿದೆ ಎಂಬುದನ್ನು ತಿಳಿಸುವುದರೊಂದಿಗೆ ಪ್ರಸ್ತುತ ಲಭ್ಯವಿರುವ ಹಾಗೂ ಮುಂದೆ ಸಿಗಲಿರುವ ಚಿಕಿತ್ಸಾ ಸೌಲಭ್ಯಗಳನ್ನು ವಿವರವಾಗಿ ತಿಳಿಸುತ್ತಾ ಇಂದಿನ ಶಿಬಿರದಲ್ಲಿ ತಾವೆಲ್ಲರೂ ಸೂಕ್ತ ದಾಖಲೆಗಳನ್ನು ಒದಗಿಸುವ ಮೂಲಕ ಉಚಿತ ಆರೋಗ್ಯ ಕಾರ್ಡ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ನಂಜುಂಡಪ್ಪ ಎಸ್ ರವರು ಮಾತನಾಡುತ್ತಾ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ ಅಡಿ ನೀಡಲಾಗುವ ಕಾರ್ಡಗಳನ್ನು ಆಯುಷ್ಮಾನ್ ಭಾರತ ಹೆಲ್ತ್ ಅಕೌಂಟ್ ಕಾರ್ಡ ಎನ್ನುತ್ತಾರೆ. ಈ ಕಾರ್ಡ್ 14 ಸಂಖ್ಯೆಯ ನಂಬರ್ ಹೊಂದಿದ್ದು ರೋಗಿಯ ಆರೋಗ್ಯ ದತ್ತಾಂಶ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ ಅಷ್ಟೇ ಅಲ್ಲದೆ ರೋಗಿಯ ಹಿಂದಿನ ಚಿಕಿತ್ಸೆಯ ದತ್ತಾಂಶ ದೊರೆಯಲಿದ್ದು ಮುಂದಿನ ಚಿಕಿತ್ಸೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಮಂಜುನಾಥ ಆರ್ ರವರು ವಂದಿಸಿದರು. ವೇದಿಕೆ ಕಾರ್ಯಕ್ರಮ ಮುಗಿದ ನಂತರ ಸಕಲೇಶಪುರ ಪಟ್ಟಣದ ಶ್ರೀ ಸಾಯಿ ಸೈಬರ್ ಮಾಲಿಕರಾದ ಶ್ರೀ ಮಂಜುನಾಥ್ ಹಾಗೂ ಕುಮಾರಿ ಚೈತ್ರ ರವರು ನಮ್ಮ ಕಾಲೇಜಿನ ಮೊದಲನೇ ಹಾಗೂ ಮೂರನೇ ಸೆಮಿಸ್ಟರ್ ಸುಮಾರು 90 ಪ್ರಶಿಕ್ಷಣಾರ್ಥಿಗಳಿಗೆ ಉಚಿತವಾಗಿ ಆಯುಷ್ಮಾನ್ ಭಾರತ ಹೆಲ್ತ್ ಕಾರ್ಡ್ ಸೃಜಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಎಲ್ಲಾ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

JSS Institute of Education
Sakaleshpura, Hassan Dist.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist